**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯದಲ್ಲಿ, ಜೇವರಗಿ**

**ಕ್ರಿಮಿನಲ್ ಮೊಕದ್ದಮೆ ಸಂಖ್ಯೆಃ 73/2025**

**ಚಾ.ಸಾ- 1**
**ಪ್ರಾ.ಸಾ - 1**

**ಸಾಕ್ಷಿಗೆ ದಿನಾಂಕ 11-06-2026ರಂದು ಪ್ರಮಾಣ ವಚನ ಬೋಧಿಸಲಾಯಿತು.**

| | | |
|---|---|---|
| ಸಾಕ್ಷಿಯ ಹೆಸರು | ಃ | ಫಾಮಿದಾ |
| ತಂದೆಯ ಹೆಸರು | ಃ | ಇಬ್ರಾಹಿಂ |
| ವಯಸ್ಸು | ಃ | 20 ವರ್ಷ |
| ಉದ್ಯೋಗ | ಃ | ಏನೂ ಇಲ್ಲಾ |
| ವಾಸಸ್ಥಳ | ಃ | ಹಾಲಗಡ್ಲಾ |

**ಮುಖ್ಯವಿಚಾರಣೆ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದ**

ನ್ಯಾಯಾಲಯದ ಮುಂದಿರುವ ಆರೋಪಿತರು ನನಗೆ ಗೊತ್ತು. ಚಾಸಾ-4 ನನ್ನ ತಂದೆ, ಚಾಸಾ-5 ಮತ್ತು 6 ನನ್ನ ತಾಯಂದಿರಾಗಬೇಕು. ಚಾಸಾ-6 ನನ್ನ ಅಣ್ಣನಾಗಬೇಕು. ಚಾಸಾ-7 ಮತ್ತು 8 ನನ್ನ ಅಣ್ಣಂದಿರಾಗಬೇಕು.

ಆರೋಪಿತರು ಮತ್ತು ನಮ್ಮ ಮಧ್ಯೆ ಗಲಾಟೆ ಆಗಿರುವುದಿಲ್ಲ. ಆರೋಪಿತರು ಕೈಯಿಂದ ಹೊಡೆ ಬಡೆ ಮಾಡಿಲ್ಲ. 1ನೇ ಆರೋಪಿ ಸಿಳ್ಳೆ ಹೊಡೆಯುವುದು ಕೈ ಸನ್ನೆ ಮಾಡುವುದು ಮತ್ತು ಹಿಂಬಾಲಿಸುವುದು ಮಾಡಿರುವುದಿಲ್ಲ. 1 ಮತ್ತು 2ನೇ ಆರೋಪಿತರು ನನಗೆ ಜೀವದ ಬೆದರಿಕೆ ಹಾಕಿಲ್ಲ.

ನಮ್ಮ ಮತ್ತು ಆರೋಪಿತರ ಮಧ್ಯೆ ಬಾಯಿ ಮಾತಿನ ಜಗಳ ಆಗಿದ್ದರಿಂದ ಪೊಲೀಸ್ ಠಾಣೆಗೆ ಹೋದಾಗ ಪೊಲೀಸರು ಒಂದು ದಾಖಲೆಯ ಮೇಲೆ ನನ್ನ ಸಹಿಯನ್ನು ಪಡೆದಿರುತ್ತಾರೆ.

ಸಾಕ್ಷಿಗೆ ದೂರನ್ನು ತೋರಿಸಲಾಗಿ ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿರುತ್ತಾರೆ. ಸದರಿ ದೂರನ್ನು ನಿಪಿ-1 ಎಂದು, ಸಾಕ್ಷಿಯ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು.

ಸಾಕ್ಷಿಗೆ ಗುನ್ನ ಸ್ಥಳದ ಪಂಚನಾಮೆ ತೋರಿಸಲಾಗಿ ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿರುತ್ತಾರೆ. ಸದರಿ ಪಂಚನಾಮೆಯನ್ನು ನಿಪಿ-2 ಎಂದು ಸಾಕ್ಷಿ ಸಹಿಯನ್ನು ನಿಪಿ-2(ಎ) ಎಂದು ಗುರುತಿಸಲಾಯಿತು.

ನಿಪಿ-1 ಮತ್ತು 2 ರಲ್ಲಿ ಬರೆದಿರುವ ವಿಚಾರ ಗೊತ್ತಿಲ್ಲ. ಪೊಲೀಸರು ನನ್ನ ಸಮಕ್ಷಮ ಯಾವುದೇ ಪಂಚನಾಮೆ ಮಾಡಿಲ್ಲ.

(ಮಾನ್ಯ ಸ.ಸ.ಅ ರವರು ಸಾಕ್ಷಿ ಪ್ರತಿಕೂಲವಾಗಿ ಸಾಕ್ಷಿ ನುಡಿದಿದ್ದಾರೆ ಹಾಗಾಗಿ ಅವರನ್ನು ಪ್ರತಿಕೂಲ ಸಾಕ್ಷಿ ಎಂದು ಘೋಷಿಸಿ ಪಾಟೀ ಸವಾಲು ಮಾಡಲು ಅನುಮತಿ ನೀಡಬೇಕೆಂದು ಕೋರಿದ್ದು, ಮುಖ್ಯ ವಿಚಾರಣೆಯಲ್ಲಿ ಸಾಕ್ಷಿ ಅಭಿಯೋಜನೆಯ ಪ್ರಕರಣಕ್ಕೆ ವ್ಯತಿರೀಕ್ತವಾಗಿ ಸಾಕ್ಷ್ಯ ನುಡಿದಿರುವುದು ಮೇಲ್ನೋಟಕ್ಕೆ ಕಂಡುಬಂದಿರುವ ಕಾರಣ ಮಾನ್ಯ ಅಭಿಯೋಜನೆಯವರಿಗೆ ಪಾಟೀಸವಾಲು ಮಾಡಲು ಅನುಮತಿಸಲಾಯಿತು)

**ಪಾಟೀ ಸವಾಲು ಮಾನ್ಯ ಸ.ಸ.ಅ.ರವರಿಂದ**

ದಿಃ 01-12-2024 ರಂದು ಮಧ್ಯಾಹ್ನ 1 ಗಂಟೆ ಸಮಯದಲ್ಲಿ ನಿಮ್ಮ ಊರಿನ ಅಗಸಿಯಲ್ಲಿರುವ ಹೊಟೆಲಿನಲ್ಲಿ ಕೆಲಸ ಮುಗಿಸಿಕೊಂಡು ಹೋಗುವಾಗ 1ನೇ ಆರೋಪಿಯು ಸಿಳ್ಳೆ ಹೊಡೆಯುವುದು ಕೈ ಸನ್ನೆ ಮಾಡುವುದು ಕಣ್ಣು ಹೊಡೆಯುವುದು ಮಾಡುತ್ತಿದ್ದ ಎಂದರೆ ಸರಿಯಲ್ಲ. 1ನೇ ಆರೋಪಿ ನಿಮ್ಮನ್ನು ಮಾತನಾಡುವುದು ಇದೆ ಎಂದು ಹಿಂಬಾಲಿಸುತ್ತಾ ಬಂದಿರುತ್ತಾನೆ ಎಂದರೆ ಸರಿಯಲ್ಲ. 1ನೇ ಆರೋಪಿಯು ನಿಮ್ಮ ಕೈ ಹಿಡಿದು ಎಳೆದಾಡಿ ಅವಮಾನ ಮಾಡಿರುತ್ತಾನೆ ಎಂದರೆ ಸರಿಯಲ್ಲ. 1ನೇ ಆರೋಪಿಯು ನಿಮಗೆ ಕಪಾಳಕ್ಕೆ ಹೊಡೆದು ರೋಡಿನ ಪಕ್ಕದಲ್ಲಿರುವ ಮುಳ್ಳುಕಂಟಿಯಲ್ಲಿ ಎಳೆದುಕೊಂಡು ಹೋಗಿರುತ್ತಾನೆ ಎಂದರೆ ಸರಿಯಲ್ಲ. ಅಲ್ಲಿ ಬರುವಂತಹ ವಾಹನಗಳನ್ನು ನೋಡಿ ನಿಮಗೆ ಬಿಟ್ಟು ಓಡಿಹೋಗುವಾಗ 1ನೇ ಆರೋಪಿಯು ಈ ವಿಷಯ ಯಾರಿಗಾದರೂ ಹೇಳಿದರೆ ಜೀವ ಸಹಿತ ಬಿಡುವುದಿಲ್ಲ ಎಂದು ಜೀವದ ಬೆದರಿಕೆ ಹಾಕಿರುತ್ತಾನೆ ಎಂದರೆ ಸರಿಯಲ್ಲ. ಇದಕ್ಕಿಂತ ಮುಂಚೆ ಆರೋಪಿತರು ಹಿಂಬಾಲಿಸಿಕೊಂಡು ಬಂದು 2ನೇ ಆರೋಪಿಯು 1ನೇ ಆರೋಪಿಯು ನಿನ್ನ ಜೊತೆ ಮಾತನಾಡುವುದು ಇದೆ ನಿನ್ನ ಫೋನ್ ನಂಬರ್ ಕೊಡು ಎಂದು ತೊಂದರೆ ಕೊಡುತ್ತಾ ಬಂದಿರುತ್ತಾನೆ ಎಂದರೆ ಸರಿಯಲ್ಲ. ಈ ಕುರಿತು ನಿಪಿ-1 ರಂತೆ ದೂರು ನೀಡಿರುತ್ತೀರಿ ಎಂದರೆ ಸರಿಯಲ್ಲ. ನೀವು ದೂರನ್ನು ನೀಡಿದ ನಂತರ ನಿಪಿ-2 ರಂತೆ ನೀವು ತೋರಿಸಿದಂತಹ ಜಾಗದಲ್ಲಿ ಬೆಳಿಗ್ಗೆ 10-30 ರಿಂದ 11-30 ವರೆಗೆ ಪಂಚನಾಮೆ ಮಾಡಿರುತ್ತಾರೆ ಎಂದರೆ ಸರಿಯಲ್ಲ.

ನೀವು ಮತ್ತು ಆರೋಪಿತರು ರಾಜೀ ಆಗಿದ್ದೀರಿ ಎಂದರೆ ಸರಿ. ನೀವು ಮತ್ತು ಆರೋಪಿತರು ರಾಜೀ ಆಗಿದ್ದರಿಂದ ಅವರು ನಿಮಗೆ ತೊಂದರೆ ಕೊಟ್ಟಿದ್ದರೂ ಸಹ ತೊಂದರೆ ಕೊಟ್ಟಿಲ್ಲ ಎಂದು ಅವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ.

**ಪಾಟಿ ಸವಾಲುಃ ಆರೋಪಿತರ ಪರ ವಕೀಲರಿಂದಃ ಇರುವುದಿಲ್ಲ.**

ಮರುವಿಚಾರಣೆ: ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಖ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೆ.ಸರಿ ಅದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ
ಪ್ರ.ದ.ನ್ಯಾ.ದಂಡಾಧಿಕಾರಿಗಳು, ಜೇವರಗಿ